## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.538/2020

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಗಣೇಶ್ ನಾಯ್ಕ | ಚಾಸಾಃ **10** ಪ್ರಾಸಾಃ **3** |
| **ತಂದೆಯ ಹೆಸರು** | : | ಲಕ್ಷ್ಮಣ್ ನಾಯ್ಕ | |
| **ವಯಸ್ಸು** | : | 46 ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಘಂಟ್ಯಾಪುರ ಗ್ರಾಮ | |

ದಿನಾಂಕಃ **28-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

**1** ನೇ ಆರೋಪಿ ಗೊತ್ತಿಲ್ಲ. **3** ನೇ ಆರೋಪಿ ನನ್ನ ಅಣ್ಣನ ಮಗ. ಚಾಸಾ-**11** ನನ್ನ ಅಣ್ಣ. **2019** ನೇ ಸಾಲಿನಲ್ಲಿ ನನ್ನ ತಂಗಿಯ ಮಗ **3** ನೇ ಆರೋಪಿಗೆ ಸೇರಿದ ಬೈಕ್ ನಲ್ಲಿ ಹೊನ್ನಾಳಿಯಿಂದ ಘಂಟ್ಯಾಪುರ ಗ್ರಾಮಕ್ಕೆ ಬರುತ್ತಿದ್ದಾಗ ತಕ್ಕನಹಳ್ಳಿ ಸೇತುವೆಯ ಹತ್ತಿರ ಟ್ರ್ಯಾಕ್ಟರ್ ಮತ್ತು ಬೈಕ್ ನ ನಡುವೆ ಅಪಘಾತವಾಗಿರುತ್ತದೆ. ನಾನು ಸದರಿ ಸ್ಥಳದಿಂದ ಸುಮಾರು ಸ್ವಲ್ಪ ದೂರದಲ್ಲಿ ಜೋಳವನ್ನು ಟ್ರ್ಯಾಕ್ಟರ್ ಗೆ ಹಾಕುತ್ತಿದ್ದು ನಂತರ ನಾನು ಅಪಘಾತವನ್ನು ನೋಡಿ ಸ್ಥಳಕ್ಕೆ ಹೋಗಿ ನಾನು ಮತ್ತು ನಮ್ಮ ಊರಿನ ಜನರು, **3** ನೇ ಆರೋಪಿ ಮತ್ತು ವಿಷ್ಣುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನ ಮತ್ತು ಚಾಸಾ-**10** ಮತ್ತು **3** ನೇ ಆರೋಪಿಯ ಸಮಕ್ಷಮ ಟ್ರ್ಯಾಕ್ಟರ್ ಇಂಜಿನ್ ನ್ನು ಅಮಾನತ್ತು ಪಡಿಸಿಕೊಂಡು, ಅಮಾನತ್ತು ಮಹಜರ್ ಕ್ರಮ ಜರುಗಿಸಿ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ.

ವಾಹನ ಅಮಾನತ್ತು ಮಹಜರ್ ನ್ನು ನಿಪಿ-**9** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**9(ಎ)** ಎಂದು, **2** ಛಾಯಾಚಿತ್ರಗಳನ್ನು ನಿಪಿ-**10** ಮತ್ತು **11** ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-

ಪೊಲೀಸರು ಅಮಾನತ್ತು ಮಹಜರ್ ಮಾಡುವ ಸಮಯದಲ್ಲಿ ನನಗೆ ನೋಟೀಸ್ ಜಾರಿ ಮಾಡಿದ್ದರು ಮತ್ತು ಸದರಿ ನೋಟೀಸ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ನೋಟೀಸ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡಿದ್ದು, ಸದರಿ ನೋಟೀಸ್ ನ್ನು ನಿಪಿ-**12** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**12**(ಎ) ಎಂದು ಗುರುತಿಸಲಾಯಿತು. ದಿಃ **12-12-2019** ರಂದು ಮಧ್ಯಾಹ್ನ **1.00** ರಿಂದ **2.00** ಗಂಟೆ ಸಮಯದಲ್ಲಿ ಅಮಾನತ್ತು ಮಹಜರ್ ಕ್ರವನ್ನು ಜರುಗಿಸಿದ್ದಾರೆ ಎಂದರೆ ಸರಿ. ಪೊಲೀಸರು ಕೆಎ-**17**-ಟಿಡಿ-**4034** ಟ್ರ್ಯಾಕ್ಟರ್ ಇಂಜಿನ್ ಮತ್ತು ಕೆಎ-**14**-ಡಬ್ಲೂ-**4577** ಮೋಟಾರ್ ಸೈಕಲ್ ಗಳನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನಗೆ ನೊಂದಣಿ ಸಂಖ್ಯೆ ಗೊತ್ತಿಲ್ಲ ಆದರೆ ನಿಪಿ-**10** ಮತ್ತು **11** ಛಾಯಾಚಿತ್ರದಲ್ಲಿ ಇರುವ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ .

ಪಾಟೀ ಸವಾಲು :- ಆರೋಪಿ ಪರ ವಕೀಲರಿಂದಃ-

ಚಾಸಾ-**2** ರಿಂದ **7** ಗೊತ್ತು ಮತ್ತು ನನ್ನ ರಕ್ತ ಸಂಬಂಧಿಕರು. ನಾನು **4-5** ವರ್ಷಗಳಿಂದ ಘಂಟ್ಯಾಪುರ ಗ್ರಾಮದ ಹತ್ತಿರ ತೋಟ ಕಾಯುವ ಕೆಲಸವನ್ನು ಮಾಡುತ್ತಿದ್ದೇನೆ. ನಾನು **4-5** ವರ್ಷಗಳಿಂದ ತೋಟ ಕಾಯುವ ಕೆಲಸವನ್ನು ಬಿಟ್ಟು ಬೇರೆ ಕೆಲಸವನ್ನು ಮಾಡುತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ಗೊತ್ತಿಲ್ಲ ಎಂದರೆ ಸರಿ. ನಿಪಿ-**9** ಮತ್ತು **12** ದಾಖಲೆಯಲ್ಲಿ ಏನು ಬರೆದಿದೇ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ . ಮೃತ ವಿಷ್ಣು ನನ್ನ ತಂಗಿಯ ಮಗನಾಗಿದ್ದರಿಂದ ಅವರ ಕುಟುಂಬದ ಕ್ಕೆ ಪರಿಹಾರವನ್ನು ಕೊಡಮ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಅಮಾನತ್ತು ಮಹಜರ್ ಕ್ರಮ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಮೃತನ ಕುಟುಂಬದವನ್ನು ನನ್ನ ರಕ್ತ ಸಂಬಂಧಿಕರಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.